

ಬಿಡಲಾಗುವುದು' ಎಂದು ಘರ್ಜಿಸಿ ಆ ಮಳೆಯಲ್ಲಿ ಪಾಟಲೀಪುತ್ರದ ಬೀದಿಯಲ್ಲಿ ನಡೆಯುತ್ತ ನಡೆಯುತ್ತ ಮಾಯವಾದಳು. ಈಗ ಸುಮಾರು ಹದಿಮೂರು ವರ್ಷಗಳ ನಂತರ ಆಕೆಯ ಹಾಗು ಸುಶೀಮನ ಮಗ ನಿಗ್ರೋಧ ಸಿಕ್ಕಿದ್ದಾನೆ. ಅವನು ತನ್ನ ಹೆಸರನ್ನು ನಿಗ್ರೋಧ ಧಮ್ಮ ಎಂದು ಬದಲಾಯಿಸಿಕೊಂಡಿದ್ದಾನೆ. ಎರಡನೆ ರಾಣಿ ದೇವಿ ಬಹಳ ಗೆಲುವಾಗಿದ್ದಳು. ಆದರೆ, ಅಸಾಂಧಿಗೆ ಒಂದು ಸಂದೇಹ ಇದ್ದೇ ಇತ್ತು. ಇವನು ಏನು ಹೇಳಿದರೂ ಇವನು ವೈರಿಯ ಮಗನೇ ಎಂಬುವುದು.